# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1516 |
| ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು | : | **ಶ್ರೀ ರಮೇಶ್** ಬಾಬು (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ: | : | 19/12/2025 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಿರಿಯ ನಾಗರೀಕರ ಕ್ಷೇಮಕ್ಕಾಗಿ ಎಷ್ಟು ವೃದ್ಧರ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ: ಇವುಗಳಲ್ಲಿ ಸರ್ಕಾರದಿಂದ ನಡೆಯುತ್ತಿರುವ ವಸತಿ ಶಾಲೆಗಳು ಎಷ್ಟು ಮತ್ತು ಖಾಸಗಿ ಸಂಸ್ಥೆಗಳಿಂದ ನಡೆಯುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು) | ರಾಜ್ಯದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಹಿರಿಯ ನಾಗರಿಕರ ಕ್ಷೇಮಕ್ಕಾಗಿ ವೃದ್ಧರ ವಸತಿ ಶಾಲೆಗಳನ್ನು ನಡೆಸುವ ಬಗ್ಗೆ ಯಾವುದೇ ಯೋಜನೆಗಳು ಜಾರಿಯಲ್ಲಿರುವುದಿಲ್ಲ. ಅದರ ಬದಲಿಗೆ ರಾಜ್ಯದಲ್ಲಿ ಇಲಾಖೆಯ ವತಿಯಿಂದ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಿಲ್ಲೆಗೆ ಒಂದರಂತೆ 31 ಜಿಲ್ಲೆಗಳ ಪೈಕಿ 28 ಜಿಲ್ಲೆಗಳಲ್ಲಿ ಹಾಗೂ ಪ್ರತಿ ಕಂದಾಯ ಉಪ ವಿಭಾಗಕ್ಕೆ ಒಂದರಂತೆ 53 ಕಂದಾಯ ಉಪವಿಭಾಗಗಳ ಪೈಕಿ 37 ಕಂದಾಯ ಉಪವಿಭಾಗಗಳಲ್ಲಿ ವೃದ್ಧಾಶ್ರಮಗಳು ಕಾರ್ಯನಿರ್ವಹಿಸುತ್ತಿರುತ್ತವೆ. |
| ಆ) | ತಾಲ್ಲೂಕುವಾರು ಹಿರಿಯ ನಾಗರೀಕರ ವಸತಿ ಶಾಲೆಗಳನ್ನು ತೆರೆಯಲು ಈಗ ಇರುವ ಅವಕಾಶಗಳು ಏನು: ಸರ್ಕಾರದ ಮುಂದೆ ಇಂತಹ ಉದ್ದೇಶ ಇದೆಯೇ: | ಇಲಾಖೆಯ ವತಿಯಿಂದ ತಾಲ್ಲೂಕುವಾರು ಯಾವುದೇ ಹಿರಿಯ ನಾಗರಿಕರ ವಸತಿ ಶಾಲೆಗಳು ಇರುವುದಿಲ್ಲ. ಸರ್ಕಾರದ ಮುಂದೆ ಈ ರೀತಿ ಯಾವುದೇ ಉದ್ದೇಶ ಇರುವುದಿಲ್ಲ. |
| ಇ) | ರಾಜ್ಯ ಸರ್ಕಾರ ಹಿರಿಯ ನಾಗರೀಕರ ಸಬಲೀಕರಣಕ್ಕೆ ರಾಜ್ಯದಲ್ಲಿ ಯಾವ ಯಾವ ಯೋಜನೆಗಳನ್ನು ಕೈಗೊಂಡಿರುತ್ತದೆ: ಹಿರಿಯ ನಾಗರೀಕರ ವಸತಿ ಶಾಲೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನುಗಳೇನು: (ವಿವರಗಳನ್ನು ಒದಗಿಸುವುದು) | ರಾಜ್ಯದಲ್ಲಿ ಇಲಾಖೆಯ ವತಿಯಿಂದ ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಇರುವ ಯೋಜನೆಗಳ ವಿವರವನ್ನು **ಅನುಬಂಧ-01 ರಲ್ಲಿ ಒದಗಿಸಲಾಗಿದೆ** |
| ಈ) | ರಾಜ್ಯದಲ್ಲಿ ಪ್ರಸ್ತುತ ಇರುವ ಹಿರಿಯ ನಾಗರೀಕರ ಸಂಖ್ಯೆ ಎಷ್ಟು: ನೀಡುತ್ತಿರುವ ವೃದ್ಧಾಪ್ಯ ವೇತನದ ಫಲಾನುಭವಿಗಳ ಸಂಖ್ಯೆ ಎಷ್ಟು: ಇದನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? | • ರಾಜ್ಯದಲ್ಲಿ 2011ರ ಜನಗಣತಿಯಂತೆ 57.91ಲಕ್ಷ ಹಿರಿಯ ನಾಗರಿಕರಿರುತ್ತಾರೆ.<br>• ರಾಜ್ಯದಲ್ಲಿ ಅಕ್ಟೋಬರ್ -2025ರ ಮಾಹೆಯಲ್ಲಿ ಒಟ್ಟು 51,36,288 ಹಿರಿಯ ನಾಗರಿಕರು ವೃದ್ಧಾಪ್ಯ ವೇತನ ಪಡೆಯುತ್ತಿದ್ದಾರೆ.<br>• ದಿನಾಂಕ:25.08.2025 ರಂದು ಹಿರಿಯ ನಾಗರಿಕರಿಗೆ ಮಾಸಿಕ ಪಿಂಚಣಿ ಹೆಚ್ಚಿಸುವ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರಿಗೆ ಅ.ಸ.ಪತ್ರ ಬರೆಯಲಾಗಿದ್ದು, ಈ ಕುರಿತು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಮಮಇ 423 ಪಿಹೆಚ್‌ಪಿ 2025**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ-1
# ಹಿರಿಯ ನಾಗರಿಕರಿಗಾಗಿ ರಾಜ್ಯ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆಗಳು:

## ಹಿರಿಯ ನಾಗರಿಕರಿಗಾಗಿ ಹಗಲು ಯೋಗಕ್ಷೇಮ ಕೇಂದ್ರಗಳು:

ರಾಜ್ಯದ 31 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50-150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಪ್ರತಿ ಕೇಂದ್ರಕ್ಕೆ ಸರ್ಕಾರದಿಂದ ವಾರ್ಷಿಕ ರೂ.9.84 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ. ಪ್ರಸ್ತುತ 26 ಜಿಲ್ಲೆಗಳಲ್ಲಿ (ಬೆಂಗಳೂರು ನಗರ ಜಿಲ್ಲೆ 02 ಸೇರಿದಂತೆ) 27 ಹಗಲು ಯೋಗಕ್ಷೇಮ ಕೇಂದ್ರಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ.

## ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 31 ಜಿಲ್ಲೆಗಳಲ್ಲಿ ನಡೆಸಲು ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. ಬೆಳಗಾವಿ, ಕಲಬುರಗಿ, ಉತ್ತರ ಕನ್ನಡ ಮತ್ತು ಹಾವೇರಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದಂತೆ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ. ಸದರಿ ಯೋಜನೆಗೆ ಪ್ರತಿ ಕೇಂದ್ರಕ್ಕೆ ಸರ್ಕಾರದಿಂದ ವಾರ್ಷಿಕ ರೂ.8.75 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

## ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರು ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

## ವೃದ್ಧಾಶ್ರಮಗಳು:

ರಾಜ್ಯದ 31 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.12.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ರಾಜ್ಯದ 31 ಜಿಲ್ಲೆಗಳಲ್ಲಿ ಜಿಲ್ಲೆಗೆ ಒಂದರಂತೆ ಹಾಗೂ ಪ್ರತಿ ಕಂದಾಯ ಉಪ ವಿಭಾಗದಲ್ಲಿ 01 ವೃದ್ಧಾಶ್ರಮವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಪ್ರಾರಂಭಿಸಲು ಅವಕಾಶವಿರುತ್ತದೆ. ಪ್ರಸ್ತುತ ಒಟ್ಟು 65 ವೃದ್ಧಾಶ್ರಮಗಳು ನಡೆಯುತ್ತಿವೆ.

**-**-**

| Senior Citizen Pensioners report up to October-2025 End | | | | | | |
|---|---|---|---|---|---|---|
| S.L No | District | OAP (60-64 Age) | OAP (65 Age Above) | OAP Total | SSY | TOTAL OAP+ SSY |
| 1 | Bagalkot | 12471 | 18748 | 31219 | 80270 | 111489 |
| 2 | Ballari | 7496 | 40403 | 47899 | 32378 | 80277 |
| 3 | Bangalore Rural | 12579 | 37755 | 50334 | 40720 | 91054 |
| 4 | Belagavi | 41026 | 78925 | 119951 | 367315 | 487266 |
| 5 | Bengaluru | 37602 | 80819 | 118421 | 166110 | 284531 |
| 6 | Bengaluru South | 12821 | 64861 | 77682 | 76735 | 154417 |
| 7 | Bidar | 22663 | 46545 | 69208 | 110835 | 180043 |
| 8 | Chamarajanagar | 22444 | 88539 | 110983 | 31348 | 142331 |
| 9 | Chikballapur | 20942 | 38965 | 59907 | 88746 | 148653 |
| 10 | Chikkamagaluru | 9538 | 36230 | 45768 | 79172 | 124940 |
| 11 | Chitradurga | 18110 | 27956 | 46066 | 108735 | 154801 |
| 12 | Dakshina Kannada | 13484 | 31196 | 44680 | 60122 | 104802 |
| 13 | Davanagere | 21077 | 58940 | 80017 | 93253 | 173270 |
| 14 | Dharwad | 12984 | 53227 | 66211 | 65412 | 131623 |
| 15 | Gadag | 15331 | 45494 | 60825 | 32675 | 93500 |
| 16 | Hassan | 38773 | 114849 | 153622 | 89373 | 242995 |
| 17 | Haveri | 18953 | 22830 | 41783 | 106196 | 147979 |
| 18 | Kalaburagi | 22409 | 38475 | 60884 | 126782 | 187666 |
| 19 | Kodagu | 5451 | 13349 | 18800 | 19984 | 38784 |
| 20 | Kolar | 15184 | 53334 | 68518 | 85910 | 154428 |
| 21 | Koppal | 13525 | 27719 | 41244 | 77296 | 118540 |
| 22 | Mandya | 46454 | 99963 | 146417 | 91229 | 237646 |
| 23 | Mysuru | 28353 | 63657 | 92010 | 158323 | 250333 |
| 24 | Raichur | 15435 | 74274 | 89709 | 109696 | 199405 |
| 25 | Shivamogga | 13319 | 32764 | 46083 | 72977 | 119060 |
| 26 | Tumakuru | 40061 | 72955 | 113016 | 206101 | 319117 |
| 27 | Udupi | 9340 | 27356 | 36696 | 61334 | 98030 |
| 28 | Uttara Kannada | 15291 | 33798 | 49089 | 54307 | 103396 |
| 29 | Vijayanagar | 13951 | 34949 | 48900 | 50324 | 99224 |
| 30 | Vijayapura | 21910 | 61908 | 83818 | 149100 | 232918 |
| 31 | Yadgir | 9403 | 23497 | 32900 | 90870 | 123770 |
| Total | | **608380** | **1544280** | **2152660** | **2983628** | **5136288** |